'ಊರುಕೇರಿ' ಆತ್ಮಕತೆಗಳ ಒಳನೋಟ

ಮಹೇಶ್ ಯು.ಸಿ.*

DOI: https://doi.org/10.5281/zenodo.23890605

ABSTRACT

ಡಾ. ಸಿದ್ದಲಿಂಗಯ್ಯನವರ 'ಊರುಕೇರಿ' (ಭಾಗ 1 ಮತ್ತು 2) ಕೃತಿಯು ಕನ್ನಡ ದಲಿತ ಆತ್ಮಕಥನಗಳ ಪರಂಪರೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ. ದಲಿತ ಮತ್ತು ಬಂಡಾಯ ಸಾಹಿತ್ಯದ ಉತ್ತುಂಗದ ಕಾಲದಲ್ಲಿ ರಚಿತವಾದರೂ, ಕಾವ್ಯದ ರೊಚ್ಚಿನ ಭಾಷೆಯ ಬದಲಿಗೆ ವ್ಯಂಗ್ಯ, ಹಾಸ್ಯ ಹಾಗೂ ನಿರ್ಲಿಪ್ತ ಶೈಲಿಯಲ್ಲಿ ನೋವು–ಅಪಮಾನಗಳನ್ನು ಇದರಲ್ಲಿ ಅಭಿವ್ಯಕ್ತಿಸಲಾಗಿದೆ. ಇದು ಕೇವಲ ವೈಯಕ್ತಿಕ ಯಶೋಗಾಥೆಯಾಗದೆ, ಇಡೀ ದಲಿತ ಸಮುದಾಯದ ಬಡತನ, ಹಸಿವು, ಅಸ್ಪೃಶ್ಯತೆ ಹಾಗೂ ಸಾಮಾಜಿಕ ಸಂಘರ್ಷಗಳ ಸಾಂಸ್ಕೃತಿಕ ಮತ್ತು ಚಾರಿತ್ರಿಕ ದಾಖಲೆಯಾಗಿದೆ. ಮಾಗಡಿಯಿಂದ ಬೆಂಗಳೂರಿನ ಕೊಳಚೆಪ್ರದೇಶದವರೆಗಿನ ಬದುಕು, ಕುಡಿಯುವ ನೀರಿನ ಸಮಸ್ಯೆ, ಜಾತೀಯತೆಯ ಕ್ರೌರ್ಯ ಹಾಗೂ ನಂತರದ ದಿನಗಳಲ್ಲಿ ಅಂಬೇಡ್ಕರ್, ಲೋಹಿಯಾ, ಮಾರ್ಕ್ಸ್‌ವಾದದ ಪ್ರಭಾವದಿಂದ ಮೂಡಿದ ವೈಚಾರಿಕ ಎಚ್ಚರ, ಬೂಸಾ ಚಳವಳಿಯಂತಹ ಐತಿಹಾಸಿಕ ಘಟನಾವಳಿಗಳನ್ನು ಇದು ಕಟ್ಟಿಕೊಡುತ್ತದೆ. ತೀವ್ರ ಶೋಷಣೆಯ ನಡುವೆಯೂ ಬದುಕನ್ನು ಪ್ರೀತಿಸುತ್ತಾ ಸಮಾಜವನ್ನು ಎದುರಿಸಿದ ದಲಿತರ ಅಸ್ಮಿತೆ ಮತ್ತು ಹೋರಾಟದ ದಿಕ್ಸೂಚಿಯಾಗಿ ಈ ಕೃತಿಯ ಮಹತ್ವವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

KEYWORDS: ಊರುಕೇರಿ, ಡಾ. ಸಿದ್ದಲಿಂಗಯ್ಯ, ದಲಿತ ಆತ್ಮಕತೆ, ಅಸ್ಪೃಶ್ಯತೆ ಮತ್ತು ಹಸಿವು, ಸಾಮಾಜಿಕ ಸಂಘರ್ಷ.

* **ಮಹೇಶ್ ಯು.ಸಿ.,** ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಡೂರು.

ಕನ್ನಡದ ದಲಿತ ಆತ್ಮ ಕತೆಗಳಲ್ಲಿ ಡಾ. ಸಿದ್ದಲಿಂಗಯ್ಯನವರ ಆತ್ಮಕತೆ 'ಊರುಕೇರಿ' ವಿಭಿನ್ನ ನೆಲೆಯಲ್ಲಿ ಅಭಿವ್ಯಕ್ತಿಗೊಂಡಿರುವ ಸಾಹಿತ್ಯ ಕೃತಿ. ಕನ್ನಡದಲ್ಲಿ ಮರಾಠಿ ಆತ್ಮಕತೆಗಳಿಂದ ಪ್ರಭಾವಿತಗೊಂಡು ಆಗಷ್ಟೆ ರಚನೆಯಾಗುತ್ತಿದ್ದ ದಲಿತ ಆತ್ಮಕತೆಗಳ ಕಾಲವದು. ಆದರೆ ಯಾವುದೇ ಪ್ರಭಾವಕ್ಕೂ ಒಳಗಾಗದೆ ತನ್ನದೇ ಆದ ಅಭಿವ್ಯಕ್ತಿ ಶೈಲಿಯನ್ನು ರೂಢಿಸಿಕೊಂಡು ರಚನೆಯಾದ ಅಪರೂಪದ ಕೃತಿಗಳು ಊರುಕೇರಿ ಭಾಗ–1 ಮತ್ತು ಊರುಕೇರಿ ಭಾಗ–2. 'ಊರು' ಮೇಲ್ಜಾತಿಯ ಸಮುದಾಯದವರು ವಾಸಿಸುವ ಸ್ಥಳವಾದರೆ ಅದೇ ಊರಿನ ಹೊರಗೆ ಕೆಳ ಜಾತಿಯ ಸಮುದಾಯದವರು ವಾಸಿಸುವ ಸ್ಥಳ 'ಕೇರಿ' ಎಂದು. ಈ ವರ್ಣ ವ್ಯವಸ್ಥೆಯ ಸಮಾಜದಲ್ಲಿ ಗುರುತಿಸಿರುವ ವಾಸಿಸುವ ಸ್ಥಳಗಳು.

ದಲಿತ ಮತ್ತು ಬಂಡಾಯ ಸಾಹಿತ್ಯ ಉತ್ತುಂಗದಲ್ಲಿದ್ದ ಕಾಲ. ಸಿದ್ದಲಿಂಗಯ್ಯನವರು ತಮ್ಮ ಕವನಗಳಲ್ಲಿ ರೊಚ್ಚಿನ ಭಾಷೆಯನ್ನು ಬಳಸಿ ದಲಿತ ಮತ್ತು ಬಂಡಾಯ ಸಾಹಿತ್ಯಕ್ಕೆ ಶಕ್ತಿ ತುಂಬಿದ್ದ ಕಾಲದಲ್ಲಿ ಕವನಗಳಲ್ಲಿ ಬಳಕೆಯಾದ ರೊಚ್ಚಿನ ಭಾಷೆಯನ್ನು ಬಳಸದೆ ಸಾಮಾನ್ಯ ಸಂಗತಿಯನ್ನು ಹೇಳಿಕೊಂಡು ಹೋಗುವ ಧ್ವನಿಯಲ್ಲಿ ರಚಿತಗೊಂಡಿರುವ ಕೃತಿಗಳು ಈ ಆತ್ಮಕತೆಗಳು. ಇದು ಈ ಕೃತಿಗಳನ್ನು ಹೆಚ್ಚಿಸುವ ಲಕ್ಷಣವೂ ಕೂಡ. ಸಾಮಾಜಿಕ ಸಾಹಿತ್ಯದ ಸಂದರ್ಭದಲ್ಲಿ ಆತ್ಮಕತೆಯು ಲೇಖಕನೊಬ್ಬನ ವೈಯಕ್ತಿಕ ಹಾಗೂ ಸಾಮುದಾಯಿಕ ಬದುಕಿನ ಸಾಂಸ್ಕೃತಿಕ ನೆಲೆಗಳ ಚಾರಿತ್ರಿಕ ದಾಖಲೆಯೂ ಕೂಡ. ಇದರ ಮೂಲಕ ಮಾನವೀಯ ಮೌಲ್ಯಗಳ ಹೊಸ ಸಮಾಜದ ನಿರ್ಮಾಣಕ್ಕೆ ದಿಕ್ಸೂಚಿಯೂ ಕೂಡ. ಇಲ್ಲಿ ಲೇಖಕರು ತಾನು ಬೆಳೆದು ಬಂದ ಪರಿಸರದ ಜೊತೆಗೆ ವ್ಯವಸ್ಥೆಯನ್ನು ತೋರಿಸುವ ಪ್ರಯತ್ನವೂ ಆಗಿದೆ.

ಆತ್ಮಕತೆ ಲೇಖಕನೊಬ್ಬನ ವೈಯಕ್ತಿಕ ಅನುಭವ ಸಾಧನೆಗಳ ದಾಖಲೀಕರಣವಾಗಿರದೇ ಶೋಷಿತ ಸಮುದಾಯದಲ್ಲಿ ಪ್ರಜ್ಞಾಪೂರ್ವಕವಾಗಿ ಎಚ್ಚರವನ್ನು ಮೂಡಿಸಬಲ್ಲ ಸಾಮಾಜಿಕ ಜವಾಬ್ದಾರಿಯುಳ್ಳ ಕೃತಿಯೂ ಹೌದು. ಹೆಸರೇ ಹೇಳುವಂತೆ ಸವರ್ಣೀಯರು ಮತ್ತು ಅಸ್ಪೃಶ್ಯರ ಬದುಕಿನಾಳದ ಹಲವು ಕಟುಸತ್ಯಗಳನ್ನು, ಸುಡುಸತ್ಯಗಳನ್ನು ಪರಿಚಯಿಸುತ್ತದೆ. ಇಲ್ಲಿ ಲೇಖಕರು ತಮ್ಮ ಬಡತನ ಮತ್ತು ಹಸಿವಿನ ಚಿತ್ರಣದ ಜೊತೆಯಲ್ಲಿ ಇಡೀ ದಲಿತ ಬದುಕಿನ ಜೀವನವನ್ನೂ ಅನಾವರಣಗೊಳಿಸಿದ್ದಾರೆ.

ಲೇಖಕರು ನೋವಿನ, ಅಪಮಾನದ ಅನುಭವಗಳನ್ನು ನಿರ್ಲಿಪ್ತವಾಗಿ ಹೇಳಿಕೊಳ್ಳುತ್ತಲೇ ಎಲ್ಲಿಯೂ ಕೂಡ ಸಿಟ್ಟನ್ನು ವ್ಯಕ್ತಪಡಿಸದೆ ವ್ಯಂಗ್ಯ, ವಿಡಂಬನೆ, ಹಾಸ್ಯದ ಮೂಲಕ ವಾಸ್ತವ ವಿಚಾರಗಳನ್ನು ತೆರೆದಿಡುತ್ತಾರೆ. 'ಊರುಕೇರಿ' ಆತ್ಮಕತೆ ಇದು ಬಡತನದ ನೋವಿನ ಕತೆಯಲ್ಲ, ಸಾಧನೆಗಳ ಚರಿತ್ರೆಯಲ್ಲ, ತಾನು ಬೆಳೆದು ದೊಡ್ಡವನಾದ ಬಗೆಯನ್ನು ದಾಖಲಿಸುವ ಹಂಬಲವಿದ್ದಂತೆ ಕಾಣುವುದಿಲ್ಲ. ಬದಲಾಗಿ ಬಡತನದಲ್ಲಿ ಹೊರಳಾಡುತ್ತಾ ಅದನ್ನು ಗೆಲ್ಲುತ್ತಾ ಅಪಮಾನ ಅನುಭವಿಸುತ್ತಲೇ ಅದರ ವಿರುದ್ಧ ಹೋರಾಡುತ್ತಾ ಸಮಾಜದ ವಾಸ್ತವ ಸ್ಥಿತಿಯನ್ನು ಕಂಡು ಅದಕ್ಕೆ

ಮುಖಾಮುಖಿಯಾಗುತ್ತಾ ಸುತ್ತಲಿನ ಪರಿಸರ ಅರ್ಥಮಾಡಿಕೊಳ್ಳುವಂತೆ ಬರೆದ ಕತೆಯಿದು. ದಲಿತರ ಆತ್ಮಕತೆಗಳು ಕನ್ನಡ ಸಾಹಿತ್ಯ ಪರಂಪರೆಗೆ ಹೊಸ ಬಗೆಯ ಅನುಭವಗಳನ್ನು, ಅನುಭವ ಲೋಕವನ್ನು ಪರಿಚಯಿಸಿವೆ. ಅದರಂತೆ ಊರುಕೇರಿಯಲ್ಲಿ ಶತಶತಮಾನಗಳಿಂದ ಮರೆಮಾಚಲಾಗಿದ್ದ ಸಾಮಾಜಿಕ ಸತ್ಯಗಳು, ಶೋಷಿತ ಸಮುದಾಯಕ್ಕೆ ಅಕ್ಷರ ಪ್ರಜ್ಞೆಯು ದೊರೆತಾಗ ಹೇಗೆ ಅವರ ಇಡೀ ಬದುಕನ್ನೇ ಸೃಜನಶೀಲ ಅಭಿವ್ಯಕ್ತಿಯನ್ನಾಗಿಸಿದೆ ಎಂಬುದಕ್ಕೆ ಸಾಕ್ಷಿಯಾಗಿವೆ. ಆತ್ಮಕತೆಯನ್ನ ವೈಯಕ್ತಿಕ ನೆಲೆಯಲ್ಲಿ ಪರಿಭಾವಿಸುವ ಸಾಂಪ್ರದಾಯಿಕ ಆಯಾಮ ಇದ್ದ ಕಾಲದಲ್ಲಿ ಆ ಸಂಪ್ರದಾಯವನ್ನು ಮೀರಿ ಸಮುದಾಯದ ನೆಲೆಯಲ್ಲಿ ಗ್ರಹಿಸುವ ವಿಶಿಷ್ಟ ಆಲೋಚನಾ ಕ್ರಮವನ್ನು ಇವರ ಆತ್ಮಕತೆಗಳು ಹುಟ್ಟುಹಾಕಿವೆ. ಅಂದರೆ ಊರುಕೇರಿ ಕೇವಲ ಸಿದ್ದಲಿಂಗಯ್ಯನವರ ಆತ್ಮಕಥನವಾಗಿರದೆ ಇಡೀ ಒಂದು ಸಮುದಾಯವೇ ಚರಿತ್ರೆಯಲ್ಲಿ ಪಟ್ಟ ಅಪಮಾನದ, ಬದುಕುಳಿಯಲು ಮಾಡಿದ ಸೆಣಸಾಟದ ಕಥನವಾಗಿದೆ. ಇದರಲ್ಲಿ ವಾಸ್ತವ ಸತ್ಯವಿದೆ. ಇದರ ಅಧ್ಯಯನವು ಶೋಷಿತ ವ್ಯಕ್ತಿ ಹಾಗೂ ಸಮುದಾಯದ ಬದುಕನ್ನು ಕಟ್ಟಿಕೊಡುತ್ತಲೇ ಆಯಾ ಕಾಲಘಟ್ಟದ ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ವಲಯದ ಹಲವು ಕಟುವಾಸ್ತವಗಳನ್ನು ಪರಿಚಯಿಸುತ್ತದೆ.

ಸಿದ್ದಲಿಂಗಯ್ಯನವರು ತಮ್ಮ ಆತ್ಮಕತೆಯಲ್ಲಿ ಸುತ್ತಲ ಸಾಮಾಜಿಕ ಪರಿಸರ ತಮ್ಮನ್ನು ನಡೆಸಿಕೊಂಡ ಬಗೆ ಹಾಗೂ ಸಾಮಾಜಿಕ ಸಂಘರ್ಷಣಾತ್ಮಕ ಜೀವನ ಕ್ರಮಕ್ಕೆ ತಮ್ಮನ್ನು ತಾವೇ ಮುಖಾಮುಖಿಯಾಗಿಸಿಕೊಂಡು ಎದುರಿಸಿದ ಸವಾಲುಗಳನ್ನು ಒಬ್ಬ ಸಮಾಜ ಚಿಂತಕನಾಗಿ ಅಭಿವ್ಯಕ್ತಿಸಿದ್ದಾರೆ. ಈ ಆತ್ಮಕತೆಯಲ್ಲಿ ತನ್ನ ಸಾಧನೆಯನ್ನು ಹೆಮ್ಮೆಯಿಂದ ಹಿಂತಿರುಗಿ ನೋಡುವ ಉದ್ದೇಶದಿಂದ ಬರೆದ ಕೃತಿಯಂತೆ ಕಾಣುವುದಿಲ್ಲ ಹಾಗೆ ಭಾವಿಸಲೂ ಬಾರದು. ಸೃಜನಶೀಲ ಮನಸ್ಸಿಗೆ ಸಹಜವಾದ ಕುತೂಹಲ. ಜಡವಾಗದ ಸೂಕ್ಷ್ಮ ಸಂವೇದನೆ ಹಾಗೂ ವಿಶಿಷ್ಟ ಎನ್ನಬಹುದಾದ ತುಂಟತನದ ಮೂಲಕ ಓದುಗ ವರ್ಗಕ್ಕೆ ಪರಿಚಯಿಸುವ ಪರಿ ಸೂಕ್ಷ್ಮವಾದುದು.

ಪ್ರಸ್ತುತ ಈ ಕೃತಿಗಳಲ್ಲಿ ಸಿದ್ದಲಿಂಗಯ್ಯನವರು ಐದು ಭಾಗಗಳನ್ನಾಗಿ ವಿಭಾಗಿಸಿಕೊಂಡು ಬಾಲ್ಯದಿಂದ ಪ್ರಾರಂಭ ಮಾಡಿ ತಾವು ಸಂಶೋಧನೆ ಸಹಾಯಕ ಹುದ್ದೆಗೆ ನೇಮಕಗೊಳ್ಳುವವರೆಗೆ ತಮ್ಮದೇ ಜೀವನಾನುಭವಗಳನ್ನು ಸರಳಾಭಿವ್ಯಕ್ತಿಯಲ್ಲಿ ನಿರೂಪಿಸಿದ್ದಾರೆ. ಹಲವು ವಿಮರ್ಶಕರು ಗುರುತಿಸಿರುವಂತೆ ಪ್ರಬಂಧ ಬರೆಯುವ ಶೈಲಿಯಲ್ಲಿ ಪ್ರಾರಂಭವಾಗಿ ತಮ್ಮ ಜೀವನದ ಒಂದೊಂದು ಘಟನೆಯೂ ಕೂಡ ಕಥೆ ಕಾದಂಬರಿಗಳಾಗುವ ಮೌಲ್ಯವುಳ್ಳವುಗಳಾಗಿವೆ. ಲೇಖಕರು ಆತ್ಮಕತೆಯ ಕೆಲವು ಭಾಗಗಳನ್ನು ಪ್ರಸಂಗಗಳನ್ನು ಶಿಷ್ಟ ಭಾಷೆಯ ಜೊತೆಗೆ ಆಡುಮಾತಿನ ಸೊಗಡಿನೊಂದಿಗೆ ಅಭಿವ್ಯಕ್ತಿಸಿರುವುದು ವಿಶೇಷವಾಗಿ ಕಾಣುತ್ತದೆ. ಮಾಗಡಿ, ಮಂಚನಬೆಲೆ, ಅವ್ವೇರಹಳ್ಳಿ, ಬೆಂಗಳೂರು ನಗರದ ಕೊಳಚೆ ಪ್ರದೇಶವಾಗಿದ್ದ ಶ್ರೀರಾಂಪುರದ ಪರಿಸರ, ತಮ್ಮ ಕೌಟುಂಬಿಕ ಚಿತ್ರಣ, ಶಿಕ್ಷಣ ಹಾಗೂ ವಿದ್ಯಾರ್ಥಿ ನಿಲಯದಲ್ಲಿನ ಅನುಭವಗಳ ವಿವರ, ಕಾಲೇಜು ದಿನಗಳಲ್ಲಿನ ಹೋರಾಟಗಳು, ಸಾಂಸ್ಕೃತಿಕ ಚಟುವಟಿಕೆಗಳ ಸಂಗತಿಗಳು,

ಪ್ರಭಾವೀಪೂರ್ಣ ವ್ಯಕ್ತಿಗಳ ವ್ಯಕ್ತಿತ್ವದ ಪರಿಚಯಗಳು ಹೀಗೆ ಹತ್ತು ಹಲವಾರು ವಿಷಯಗಳನ್ನು ಅನುಭವದ ಮೂಲಕ ಎಳೆಎಳೆಯಾಗಿ ವಿವರಣಾತ್ಮಕವಾಗಿ ತಿಳಿಸಿದ್ದಾರೆ.

ಆತ್ಮಕತೆ ಪ್ರಾರಂಭವಾಗುವುದೇ 'ಕೇರಿಯಲ್ಲಿ ಕೊನೆಯ ಮನೆ ನಮ್ಮದು' ಎಂಬ ಸಾಲಿನ ಮೂಲಕ. ಅಂದರೆ ಈ ಸಾಲಿನ ಅರ್ಥವೇ ತಿಳಿಸುತ್ತದೆ ಸಮಾಜದ ಶ್ರೇಣೀಕೃತ ವ್ಯವಸ್ಥೆಯಲ್ಲಿ ದಲಿತರ ಜಾಗ ಯಾವುದೆಂದು. ಊರಿನಲ್ಲಿ ಮೊದಲ ಅಥವಾ ನಡುವಿನ ಮನೆಯಾಗಿ ಇರದೆ ಊರಿನ ಹೊರಗಿನ ಕೇರಿಯಲ್ಲಿ ಕೊನೆಯ ಮನೆಯೆಂದು. ಬಡತನದ ಬೇಗೆಯಲ್ಲಿ ಬೆಂದಿರುವ ಲೇಖಕರ ಕುಟುಂಬ ಬಡತನದ ಕುಟುಂಬ ಎಂಬ ಕಾರಣದಿಂದಲೂ ಕೇರಿಯ ಕೊನೆಯಲ್ಲಿರಬಹುದು. ಆರ್ಥಿಕವಾಗಿ ಸದೃಢ ಕುಟುಂಬವಾಗಿದ್ದರೆ ಕೇರಿಯಲ್ಲೂ ಮೊದಲಿರಬಹುದಿತ್ತು.

ಆತ್ಮಕತೆಯಲ್ಲಿ ಚಿತ್ರಿತವಾದಂತೆ ದಲಿತರ (ಅಸ್ಪೃಶ್ಯರ) ಹಲವು ಸಮಸ್ಯೆಗಳಲ್ಲಿ ಸಾರ್ವತ್ರಿಕವಾಗಿ ಬಳಸಲು ಸಾಧ್ಯವಾಗದ ನೀರಿನ ಸಮಸ್ಯೆ. ಡಾ. ಅಂಬೇಡ್ಕರ್ ರವರು ತಮ್ಮ ಜೀವಿತ ಅವಧಿಯಲ್ಲಿ ಈ ಸಮಸ್ಯೆಯ ವಿರುದ್ಧ ಹೋರಾಡಿದ್ದು (ಚೌದಾರ್ ಕೆರೆಯ ಪ್ರಸಂಗ) ಒಂದು ಇತಿಹಾಸ. ಅಂದರೆ ಕೆಳಜಾತಿಯವರು ಸಾರ್ವಜನಿಕ ಕುಡಿಯುವ ನೀರನ್ನು ಬಳಸದಂತೆ ನಿಷೇಧಿಸಿರುವ ಪ್ರಸಂಗಗಳು ಅನೇಕ. ಜಾತಿಯ ಕಾರಣಕ್ಕಾಗಿ ಪ್ರತ್ಯೇಕಿಸಲ್ಪಟ್ಟಿರುವ ದಲಿತರು ಸವರ್ಣೀಯರ ಬಾವಿಗಳಿಗೆ ನೀರು ತರಲು ಹೋಗದೆ ತಮಗೆ ಮೀಸಲಾದ ಬಾವಿಗಳಲ್ಲಿಯೇ ನೀರನ್ನು ಬಳಸಬೇಕೆಂಬ ಸಾಮಾಜಿಕ ಕಟ್ಟುಪಾಡುಗಳು ಇಂದಿಗೂ ಜೀವಂತವಾಗಿರುವ ಪ್ರಸಂಗಗಳು ನಮ್ಮ ಮುಂದಿವೆ. ಈ ವಿಚಾರವಾಗಿಯೇ ಲೇಖಕರು ಕೃತಿಯಲ್ಲಿ ಹೀಗೆ ಹೇಳಿದ್ದಾರೆ: "ಆ ಜಮೀನಿನಲ್ಲಿ ಐನೋರ ಚಂದವಾದ ಮನೆ, ದೊಡ್ಡದಾದ ಬಾವಿ, ಪಂಪ್‌ಸೆಟ್ ಮನೆ ಇದ್ದವು. ಈ ಬಾವಿಯಿಂದ ಅವರ ಹೊಲ ಗದ್ದೆಗಳಿಗೆ ನೀರು ಹರಿಯುತ್ತಿತ್ತು. ನಮ್ಮ ಕೇರಿಯ ಜನರಿಗೆ ಕುಡಿಯಲು ನೀರು ಸಿಕ್ಕರೆ ಅದೇ ದೊಡ್ಡ ಸಂಗತಿ. ನಮ್ಮ ಜನ ಸ್ವಲ್ಪ ದೂರದಲ್ಲಿದ್ದ ಹೂವಿನ ಪಕ್ಕದ ತೋಟದ ಬಾವಿಯಿಂದ ನೀರನ್ನು ತರುವುದನ್ನು ನಾನು ನೋಡಲಿಲ್ಲ" ಎಂದಿರುವುದು. ಒಂದು ಸಮುದಾಯ ಕುಡಿಯುವ ನೀರಿಗಾಗಿ ಪರಿತಪಿಸುತ್ತಿದ್ದಾಗಲೇ ಮತ್ತೊಂದು ಸಮುದಾಯ ತಮ್ಮ ಜಮೀನಿಗೆ ಯಥೇಚ್ಛವಾಗಿ ನೀರನ್ನು ಹರಿಸುವುದು ಈ ಸಮಾಜದ ಅವ್ಯವಸ್ಥೆಗೆ ಕನ್ನಡಿ ಎಂದು ತೋರುವುದಾಗಿದೆ.

ಬಾಲ್ಯದ ದಿನದಲ್ಲಿನ ನೋವಿನ ಅನುಭವಗಳು ಸಿದ್ದಲಿಂಗಯ್ಯನವರ ಎದೆಯಾಳದಲ್ಲಿ ಜೀವಂತವಾಗಿರುವುದನ್ನು ಚಿತ್ರಿಸಿರುವ ಕೆಲವು ಪ್ರಸಂಗಗಳು ಇದರಲ್ಲಿವೆ. "ಎಂದಿನಂತೆ ಹುಡುಗರೆಲ್ಲ ನಮ್ಮ ಮನೆಯ ಪಕ್ಕದ ಮೋಟುಗೋಡೆಯ ಮೇಲೆ ನಿಂತು ಅಪ್ಪ ಅವ್ವಂದಿರನ್ನು ಕೂಗುತ್ತಿದ್ದಾಗ ನಮಗೆ ಒಂದು ನೋಟ ಕಾಣಿಸಿತು. ಐನೋರ ಹೊಲದಲ್ಲಿ ಇಬ್ಬರು ಮನುಷ್ಯರ ಹೆಗಲಮೇಲೆ ನೊಗ ಹೂಡಿ ಇನ್ನಿಬ್ಬರು ಹೊಲ ಉಳುತ್ತಿದ್ದರು. ನೊಗ ಹೊತ್ತ ಆ ಇಬ್ಬರು ಮನುಷ್ಯರು ಎತ್ತುಗಳಂತೆ ಮುಂದೆ ಹೋಗುತ್ತಿದ್ದರೆ ಇನ್ನೊಬ್ಬ ಹಿಂದಿನಿಂದ ಚಾಟಿ ತಿರುಗಿಸುತ್ತಾ ಉಳುಮೆ ಮಾಡುತ್ತಿದ್ದ.

ಇಬ್ಬರು ವ್ಯಕ್ತಿಗಳಲ್ಲಿ ಒಬ್ಬರು ನನ್ನ ಅಪ್ಪ ಎಂದು ಗೊತ್ತಾದಕ್ಷಣದಿಂದ ನನ್ನಲ್ಲಿ ಒಂದು ವಿಚಿತ್ರ ಸಂಕಟ ಶುರುವಾಯಿತು. ಹುಡುಗರಿದ್ದ ಜಾಗಕ್ಕೆ ಬಂದ ಕೆಲವು ಹೆಂಗಸರು ಪಾಪ ದ್ಯಾವಣ್ಣನಿಗೆ ಎಂಥ ಕಷ್ಟ ಬಂತು ಎಂದದ್ದು ನನ್ನ ಕಿವಿಗೆ ಬಿದ್ದು ಮನಸ್ಸಿನ ನೋವು ಇಮ್ಮಡಿಯಾಯಿತು. ಗದ್ದೆಯಲ್ಲಿ ಎತ್ತಾಗಿ ದುಡಿದ ನಮ್ಮಪ್ಪ ಸಂಜೆ ಮನೆಗೆ ಬಂದಾಗ ಅವ್ವ ಅವನ ಭುಜಕ್ಕೆ ಎಣ್ಣೆ ಕಾಯಿಸಿ ಹಚ್ಚುತ್ತಿದ್ದಳು.'' ಇಂತಹ ಪ್ರಸಂಗಗಳ ಮೂಲಕ ಲೇಖಕರು, ಗ್ರಾಮೀಣ ಪ್ರದೇಶಗಳಲ್ಲಿನ ಜಮೀನ್ದಾರಿ ವ್ಯವಸ್ಥೆಯ ಕ್ರೌರ್ಯಗಳನ್ನು ಹಾಗೂ ಮೇಲ್ಜಾತಿಯವರ ಬದುಕಿನ ಜೀವಂತಿಕೆಯನ್ನು ಕಾಪಾಡುವುದಕ್ಕಾಗಿ ದಲಿತರು ಸಹಿಸುತ್ತಿದ್ದ ಶ್ರಮದ ಭೀಕರತೆಯನ್ನು ತಿಳಿಸಿದ್ದಾರೆ. ಸಮಾಜದಲ್ಲಿನ ಜಾತಿ ಮತ್ತು ವರ್ಗ ವ್ಯವಸ್ಥೆಯ ಅಮಾನವೀಯತೆಯನ್ನು ಇಂತಹ ಪ್ರಸಂಗಗಳು ಬಿಂಬಿಸುತ್ತವೆ. ಜೊತೆಗೆ ತಂದೆ ಬ್ರಾಹ್ಮಣರ ಹೊಲದಲ್ಲಿ ಗೇಣಿದಾರನಾಗಿ ದುಡಿಯುತ್ತಿದ್ದದ್ದು, ಸಾಲದ ಹೊರೆಯನ್ನು ತೀರಿಸಲು, ಸಂಸಾರದ ನಿರ್ವಹಣೆಗಾಗಿ ತಿಂಗಳುಗಟ್ಟಲೆ ದೂರದ ಊರುಗಳಿಗೆ ಕೆಲಸ ಹುಡುಕಿಕೊಂಡು ಹೋಗುತ್ತಿದ್ದದ್ದು, ಆನಂತರ ಮಹಾ ಸಾಲಗಾರನಾಗಿ ಸಂಸಾರ ಸಮೇತ ಮಾಗಡಿ ಬಿಟ್ಟು ಬೆಂಗಳೂರು ಸೇರಿದ ಪರಿಸ್ಥಿತಿಗಳನ್ನು ವಿವರಿಸಿದ್ದಾರೆ.

ಹಸಿವು, ಬಡತನಗಳ ತೀವ್ರತೆ ಹಾಗೂ ಅವುಗಳನ್ನು ಎದುರಿಸುವ ಸಲುವಾಗಿ ದಲಿತರು ನಡೆಸಿದ ಹೋಯ್ದಾಟಗಳು ನೂರಾರು. ಸಿದ್ದಲಿಂಗಯ್ಯನವರು ಹಸಿವು ಬಡತನವನ್ನು ಸಹಿಸಿಕೊಂಡ ಬಗೆಯನ್ನು ಕುರಿತು: ''ಮಾವಿನ ಮರದ ಹೊಲದ ಒಡೆಯರು ಬಹು ಉದಾರಿಗಳು. ಪೇಟೆಯಲ್ಲಿದ್ದ ಅವರ ಮನೆಗೆ ಹೋಗಿ ಅಪ್ಪ, ಅವ್ವ, ನಾನು ಅವರ ಬಾಗಿಲ ಮುಂದೆ ನಿಂತಾಗ ಅವರು ಮನೆಯಲ್ಲಿ ಉಳಿದಿದ್ದ ಚಿತ್ರಾನ್ನ, ಪೂರಿ ಇತ್ಯಾದಿಗಳನ್ನು ಕೊಡುತ್ತಿದ್ದರು. ಇದಲ್ಲದೆ ಐನೋರ ಹಳೆಯದಾದ, ಸ್ವಲ್ಪ ಹರಿದು ಹೋದ ತಮ್ಮ ಮಗನ ಷರಾಯಿ, ಅಂಗಿಯನ್ನು ನನಗೆ ಕೊಡುತ್ತಿದ್ದರು. ಅವರ ಮಗ ನನಗಿಂತ ದೊಡ್ಡವನಾದುದರಿಂದ ಅವು ನನಗೆ ದೊಗಳೆ ಆಗುತ್ತಿದ್ದವು. ಆದರೂ ಅವುಗಳನ್ನು ಮಡಚಿಕೊಂಡು ನಾನು ಧರಿಸುತ್ತಿದ್ದೆ. ಈ ಬಟ್ಟೆಗಳನ್ನು ಧರಿಸುತ್ತಿದ್ದರಿಂದ ನಾನು ನನ್ನ ಓರಗೆಯ ಇತರ ಹುಡುಗರಿಗಿಂತ ವಿಚಿತ್ರವಾಗಿ ಕಾಣುತ್ತಿದ್ದೆ ಎಂದಿರುವುದು ದಲಿತರ ಬಡತನದ ಚಿತ್ರಣವೂ ಆಗಿದೆ.

ಮಾಗಡಿಯ ಇಡೀ ದಲಿತ ಸಮುದಾಯದ ಬದುಕನ್ನು ಆವರಿಸಿಕೊಂಡಿದ್ದ ದೇವರು ದೆವ್ವಗಳ ಬಗೆಗಿನ ಮೂಢನಂಬಿಕೆಯ ಪರಿಕಲ್ಪನೆಯನ್ನು: ದೇವರು ಮೈದುಂಬುವುದು, ಜಡೆಮುನಿ ಸಂಚಾರ, ಪಿಶಾಚಿಗಳು ಚಪ್ಪಾಳೆ ತಟ್ಟುವುದು, ಕೇಕೆ ಹಾಕುವುದು, ಕೂಗುಮಾರಿಯ ಗಲಾಟೆಯಂತಹ ಕೌತುಕ ಸಂಗತಿಗಳ ಬಗ್ಗೆ ವಿವರವಾಗಿ ತಿಳಿಸಿದ್ದಾರೆ. ಮಾಗಡಿ, ಮಂಚನಬೆಲೆ, ಅವ್ವೇರಹಳ್ಳಿಗಳಲ್ಲಿ ನಡೆಯುತ್ತಿದ್ದ ಗ್ರಾಮದೇವತೆ ಹಬ್ಬಗಳ ಸ್ವಾರಸ್ಯ ಮತ್ತು ಆ ಹಬ್ಬಗಳು ತಮ್ಮನ್ನು ಪ್ರಭಾವಿಸಿದ ಬಗೆಯನ್ನು ಸಹ ತೆಳುವಾದ ಹಾಸ್ಯದಲ್ಲಿ ಚಿತ್ರಿಸಿದ್ದಾರೆ. ಜೊತೆಗೆ ಮಂಚನಬೆಲೆ, ಅವ್ವೇರಹಳ್ಳಿಗಳಲ್ಲಿನ ಪ್ರಾಕೃತಿಕ ಸೌಂದರ್ಯ ಜುಳು ಜುಳು ಹರಿಯುವ ಅರ್ಕಾವತಿ ನದಿ, ಬೆಟ್ಟದ ಬುಡದಲ್ಲಿ ಹಿಂಡುಹಿಂಡಾಗಿ ಕುಣಿಯುತ್ತಿದ್ದ ನವಿಲುಗಳು ತಮ್ಮನ್ನು

ಆಕರ್ಷಿಸಿದ ಬಗೆಯನ್ನು ವಿವರಿಸಿದ್ದಾರೆ.

ತಮ್ಮನ್ನು ಬಾಲ್ಯದಿಂದಲೂ ಕಾಡಿರುವ ಜಾತೀಯತೆ, ಅಸ್ಪೃಶ್ಯತೆಯ ಅನುಭವಗಳನ್ನು ಇದರಲ್ಲಿ ನಾಜೂಕಾಗಿ ಪ್ರಸ್ತಾಪಿಸಿದ್ದಾರೆ. ಬರಗಾಲದ ದಿನಗಳಲ್ಲಿ ಮಾಗಡಿಯ ಜನ ಮಳೆ ಬರಲೆಂದು ಪರ ಮಾಡುತ್ತಿದ್ದಾಗ ಅಲ್ಲಿಗೆ ದಲಿತರು ಊಟಕ್ಕೆ ಹೋದರೆ ಅವರನ್ನು ಪ್ರತ್ಯೇಕವಾಗಿ ಕೂರಿಸಿ ಮೇಲುಜಾತಿಯ ಜನರ ಊಟವಾದ ಬಳಿಕ ದಲಿತರಿಗೆ ಊಟ ಕೊಡುತ್ತಿದ್ದುದ್ದನ್ನು, ಹಾಗೆಯೇ ಬರಗಾಲದ ಸಂದರ್ಭದಲ್ಲಿನ ದಲಿತರ ಅನ್ನದ ಸಮಸ್ಯೆಯ ಚಿತ್ರಣವನ್ನು ತಿಳಿಸಿದ್ದಾರೆ. ದಲಿತರ ಗುರುವಾಗಿದ್ದ ಸವರ್ಣೀಯ ವ್ಯಕ್ತಿ ದಲಿತರ ಕೇರಿಗೆ ಪ್ರವೇಶಿಸದೆ ಕೇರಿಯ ಹೊರಗೆ ನಿಂತು ದಲಿತರಿಂದ ಗೌರವ ಮತ್ತು ಕಾಣಿಕೆಯನ್ನು ಸ್ವೀಕರಿಸುತ್ತಿದ್ದದ್ದು, ತಂದೆಯೊಟ್ಟಿಗೆ ಲೇಖಕರು ಸವರ್ಣೀಯರ ಸ್ನೇಹಿತರ ಮನೆಯ ಬಳಿಗೆ ಹೋದಾಗ ಇವರನ್ನು ಮನೆಯ ಹೊರಗಡೆ ಕಲ್ಲಿನ ಮೇಲೆ ಕೂರಿಸಿ ತಿನ್ನಲು ಕೊಡುತ್ತಿದ್ದದ್ದು, ತಮ್ಮ ದೊಡ್ಡಪ್ಪ ಇಟ್ಟಿದ್ದ ಹೋಟೆಲ್ಲಿಗೆ ದಲಿತರು ಮಾತ್ರ ಬರುತ್ತಿದ್ದದ್ದು, ಸವರ್ಣೀಯರ ಹೋಟೆಲುಗಳಿಗೆ ಹೋದಾಗಲೂ ಕೂಡ ಇವರನ್ನು ಇತರರಿಗಿಂತ ದೂರದಲ್ಲಿ ಕೂರಿಸುತ್ತಿದ್ದದ್ದು, ಮಂಚನಬೆಲೆಗೆ ಅಜ್ಜಿಯೊಟ್ಟಿಗೆ ಹೋಗುತ್ತಿದ್ದಾಗ ಆಕಸ್ಮಿಕವಾಗಿ ತಮ್ಮ ಕೈ ಸವರ್ಣೀಯ ವ್ಯಕ್ತಿಯ ಬಟ್ಟೆಗೆ ತಾಕಿದಾಗ ಆ ವ್ಯಕ್ತಿ ಕೋಪಿಸಿಕೊಂಡದ್ದು, ಅದಕ್ಕಾಗಿ ಅಜ್ಜಿ ಪರಿಪರಿಯಾಗಿ ಆ ವ್ಯಕ್ತಿಯಲ್ಲಿ ಕ್ಷಮೆಕೇಳಿದ್ದು ಈ ಎಲ್ಲಾ ಪ್ರಸಂಗಗಳು ಬಾಲ್ಯದಲ್ಲಿ ಸಿದ್ದಲಿಂಗಯ್ಯನವರ ಮನಸ್ಸಿನ ಮೇಲೆ ಉಂಟು ಮಾಡಿದ ಜಾತೀಯತೆಯ ಪರಿಣಾಮದ ಗಾಢತೆಯನ್ನು ಕಟ್ಟಿಕೊಡುತ್ತದೆ.

ಮನುಷ್ಯ ಸಂಬಂಧ ಮತ್ತು ಸಂವೇದನೆಗಳನ್ನು ಕುರಿತು ವಿಶ್ಲೇಷಿಸುವಾಗ ಪ್ರಾಣ ಸ್ನೇಹಿತರಿಬ್ಬರ ಕ್ಷುಲ್ಲಕ ಕಾರಣದ ಜಗಳ, ಲೇಖಕರ ಓರಗೆಯ ಹುಡುಗಿಯೊಬ್ಬಳು ಬಸ್ಸಿಗೆ ಸಿಕ್ಕಿ ಸತ್ತ ಭೀಕರ ಘಟನೆ, ಪ್ರಾಮಾಣಿಕತೆ ಮೈಗೂಡಿಸಿಕೊಂಡಿದ್ದ ಲೇಖಕರ ದೊಡ್ಡಪ್ಪ ಆಲಯ ಮಾಗಡಿ ಪುರಸಭೆಗೆ ಆರಿಸಿ ಬಂದದ್ದು ಹಾಗೂ ಹೆಂಗಸೊಬ್ಬಳಿಂದ ಸಾಲ ಪಡೆದು ತೀರಿಸಲಾಗದೆ ಅವಮಾನಿತನಾಗಿ ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡದ್ದು, ಲೇಖಕರ ತಂದೆ ಮಹಾಸಾಲಗಾರನಾಗಿ ಊರು ಬಿಟ್ಟು ಬೆಂಗಳೂರು ಸೇರಿದಾಗ ಇವರ ಇಡೀ ಸಂಸಾರವನ್ನು ಇವರ ಸೋದರ ಮಾವ ಮಂಚನಬೆಲೆಯ ಅವರ ಮನೆಗೆ ಕರೆದೊಯ್ದದ್ದು, ಗಾಂಧೀಜಿಯವರು ತಮ್ಮ ಭಾಷಣದಲ್ಲಿ ''ಯಾರು ಕುಡಿಯುವುದಿಲ್ಲ ಅವರು ಕೈ ಮೇಲೆತ್ತಿ'' ಎಂದಾಗ ತಾವೂ ಕೈ ಮೇಲೆತ್ತಿ ಪ್ರಮಾಣಮಾಡಿ ಮದ್ಯಪಾನ ತ್ಯಜಿಸಿದ್ದು ಈ ಎಲ್ಲಾ ಘಟನೆಗಳು ಮತ್ತು ವ್ಯಕ್ತಿಗಳು ಒಂದಲ್ಲ ಒಂದು ರೀತಿಯಲ್ಲಿ ಲೇಖಕರನ್ನು ಪ್ರಭಾವಗೊಳಿಸಿರುವುದನ್ನು ಕಾಣಬಹುದು.

ಆತ್ಮಕತೆ ಭಾಗ–2 ರಲ್ಲಿ ಮಂಚನಬೆಲೆಯ ಸೋದರಮಾವನ ಕಿಲಾಡಿತನದ ವಿವರದೊಟ್ಟಿಗೆ ಆರಂಭಗೊಳ್ಳುತ್ತದೆ. ಲೇಖಕರ ಕುಟುಂಬ ಮಾಗಡಿಯಿಂದ ಬೆಂಗಳೂರಿನ ಶ್ರೀರಾಂಪುರಕ್ಕೆ ಬಂದು ನೆಲೆಸಿದ್ದರಿಂದ ಆರಂಭಗೊಂಡು ಸೋದರ

ಮಾವನ ಕಿಲಾಡಿತನ, ಸಮಯಪ್ರಜ್ಞೆ ಹಾಗೂ ನಟನಾ ಕೌಶಲ್ಯದ ಕೆಲವು ಪ್ರಸಂಗಗಳನ್ನು ವಿವರಿಸಿದ್ದಾರೆ. ಹಸಿವಿನ ತೀವ್ರತೆಯಿಂದ ತಪ್ಪಿಸಿಕೊಂಡು ಬಂದಿದ್ದ ಎಮ್ಮೆಯನ್ನು ಕೊಯ್ದು ತಿಂದು ಹುಡುಕಿಕೊಂಡು ಬಂದ ಎಮ್ಮೆಯ ಮಾಲೀಕನಿಗೆ ಊರಿನಲ್ಲಿರುವ ಕಾಯಿಲೆ ಮತ್ತು ಸಾವಿನ ಬಗ್ಗೆ ತಿಳಿಸುವ ಸಮಯಪ್ರಜ್ಞೆ ಹಾಗೂ ಜಾಣ್ಮೆಯನ್ನು ಗುರುತಿಸಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ ಅನಿವಾರ್ಯ ಸ್ಥಿತಿಯಲ್ಲಿ ಬೆಂಗಳೂರಿಗೆ ಬಂದು ಹೊಂದಿಕೊಳ್ಳುವಾಗ ನಾನಾ ಕಸರತ್ತುಗಳೇ ನಡೆಯುತ್ತವೆ. ಬಾಲ್ಯದಲ್ಲಿ ತುಂಟತನವಿದ್ದ ಲೇಖಕರನ್ನು ಒಂದು ಬಾರಿ ತಂದೆ–ತಾಯಿಗಳು ಒಮ್ಮೆ ಶನಿಮಹಾತ್ಮನ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿದ್ದಾಗ ಪೂಜಾರಿಯು ಹುಡುಗನನ್ನು ಸರಿದಾರಿಗೆ ತರಲು ನವಿಲು ಗರಿಯಿಂದ ಹೊಡೆದು ತಲೆಯ ಮೇಲೆ ದೇವರ ಕಿರೀಟವನ್ನಿಟ್ಟಾಗ ಕಿರೀಟವನ್ನು ಹೊತ್ತು ಓಡಿ ಪೂಜಾರಿಯಲ್ಲಿ ಗಾಬರಿ ಹುಟ್ಟಿಸಿದ ಪ್ರಸಂಗ ಓದುಗರಲ್ಲಿ ನಗುತರಿಸುತ್ತದೆ.

ಬಡತನ ಹಾಗೂ ಹಸಿವು ಮಕ್ಕಳ ಮನಸ್ಸಿನ ಮೇಲೆ ಹೇಗೆ ಪರಿಣಾಮವನ್ನುಂಟುಮಾಡುತ್ತದೆ ಎಂಬುದಕ್ಕೆ ಲೇಖಕರು ಹೇಳಿರುವ ಹಲವು ಸಂಗತಿಗಳು ಸ್ಪಷ್ಟಪಡಿಸುತ್ತವೆ ಎಂಬುದನ್ನು ನೋಡಬಹುದು. ತಮ್ಮ ಇಷ್ಟಾರ್ಥಕ್ಕೆ ಸ್ಪಂದಿಸದ ಅಪ್ಪನನ್ನೇ "ನನ್ನನ್ನು ಸಾಕಲು ಆಗದಿದ್ದರೆ ಯಾಕೆ ಹುಟ್ಟಿಸಬೇಕಾಗಿತ್ತು" ಎಂಬುದಾಗಿ ಪ್ರಶ್ನಿಸುವ, ಹಸಿವಾದಾಗ ಹಸಿವಿನ ನೋವಿನಿಂದ ತಂದೆ ತಾಯಿಗಳನ್ನೇ ಹೊಡೆಯಲು ಹೋಗುವ ಮಕ್ಕಳ ಮನಸ್ಥಿತಿ, ಹಾಲುಮಾರುತ್ತಿದ್ದ ರಾಮಕೃಷ್ಣ ಬಡತನಕ್ಕೆ ಸ್ಪಂದಿಸಿದ ರೀತಿ, ಇನ್ನೊಬ್ಬ ಗೆಳೆಯ ಐಸ್ ಕ್ಯಾಂಡಿಯನ್ನು ಮಾರಿ ಓದಿ ವಿದ್ಯಾವಂತನಾಗಿ ಬಡತನವನ್ನು ಮೆಟ್ಟಿ ನಿಂತು ಉನ್ನತ ಅಧಿಕಾರಿಯಾದ ಸ್ನೇಹಿತನ ದೃಢಸಂಕಲ್ಪ, ಮೂರನೇ ತರಗತಿ ಓದುತ್ತಿದ್ದಾಗ ಸರ್ಕಾರದಿಂದ ಬಡ ಮಕ್ಕಳಿಗೆ ಹಂಚಲು ಬಂದಿದ್ದ ಪೆನ್ ಪೆನ್ಸಿಲ್ ಗಳನ್ನು ಹಂಚುವಾಗ ಅವರು ಬಡ ಮಕ್ಕಳು ಎದ್ದು ನಿಲ್ಲಿ ಅಂದಾಗ ಲೇಖಕರು ಬಡವರಾಗಿದ್ದರೂ ಎದ್ದು ನಿಲ್ಲದೆ ಸ್ವಾಭಿಮಾನ ಮೆರೆದದ್ದು, ನೀರು ಹರಿಯುವ ಮೋರಿಗೆ ಇಳಿದು ತಾಮ್ರ, ಹಿತ್ತಾಳೆ ಚೂರು ಆಯ್ದು ಮಾರಿ ತಿಂಡಿ ತಿಂದದ್ದು, ಶಾಲೆಗೆ ಬ್ಯಾಗಿನಲ್ಲಿ ರಾಗಿಮುದ್ದೆ ತಂದ ಸಂಗತಿ ಇತರೆ ಹುಡುಗರಿಗೆ ತಿಳಿದು 'ಮುದ್ದೇ ಮುದ್ದೇ' ಎಂದು ಹಂಗಿಸಿಕೊಂಡ ಸಂಗತಿಗಳು ಬಡತನದ ಬವಣೆಗಳನ್ನು ತೆರೆದಿಡುತ್ತವೆ. ಹಸಿವಿನ ತೀವ್ರತೆಯಲ್ಲಿ ಇಡ್ಲಿ ಸಾಗು ಚಟ್ನಿ ದೋಸೆಯನ್ನು ಪ್ರಧಾನ ಆಹಾರದಂತೆ ಸೇವಿಸಿದ್ದು, ಎಷ್ಟೇ ದುಡಿದರೂ ಸಾಕಾಗದೆ ಲೇವಾದೇವಿಯವರಿಂದ ಸಾಲಪಡೆದು ತೀರಿಸಲಾಗದೆ ಹಲ್ಲೆಗೊಳಗಾಗಿ ಅವಮಾನಿತಗೊಂಡ ತಂದೆ ವಿಷ ಸೇವಿಸಿ ಬದುಕುಳಿದ ಘಟನೆ, ವಿದ್ಯಾರ್ಥಿ ನಿಲಯದಲ್ಲಿ ಕಸಗುಡಿಸುವ ಕೆಲಸಕ್ಕೆ ಸೇರಿದ್ದ ತಾಯಿ ಕೆಲಸ ಮುಗಿದ ನಂತರ ಹಾಸ್ಟೆಲ್ ನಿಂದ ತರುತ್ತಿದ್ದ ಊಟಕ್ಕಾಗಿ ಕಾದು ಅದನ್ನು ತಿಂದು ಹಸಿವು ನೀಗಿಸಿಕೊಳ್ಳುತ್ತಿದ್ದ ಸಂದರ್ಭ.

ತಾಯಿ ಕೆಲಸಕ್ಕೆ ಹೋಗುತ್ತಿದ್ದ ಹಾಸ್ಟೆಲ್‌ಗೆ ವಿದ್ಯಾರ್ಥಿಯಾಗಿ ಲೇಖಕರೇ ಸೇರಿದಾಗ ಅದರ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಶಾಲೆಗೆ ಹೋಗುವಾಗ ಹಸಿವನ್ನು ತಡೆಯಲಾರದೆ ರಸ್ತೆ ಬದಿಯಲ್ಲಿದ್ದ ಮನೆಗಳ ಮುಂದೆ ಬೆಳೆದಿದ್ದ ಹಣ್ಣುಗಳನ್ನು ಕದ್ದು ತಿನ್ನುತ್ತಿದ್ದದ್ದು, ಗೋಣಿಚೀಲ ತೆಗೆದುಕೊಂಡು ಮಾರುಕಟ್ಟೆಗೆ ಹೋಗಿ ತರಕಾರಿಗಳನ್ನು ಬೇಡಿ ತರುತ್ತಿದ್ದ ಪ್ರಸಂಗ ದಾಖಲಿಸಿದ್ದಾರೆ.

ಪಿ.ಯು.ಸಿ.ಯಲ್ಲಿದ್ದಾಗಲೇ ಕವಿತೆ ಬರೆಯಲಾರಂಭಿಸಿದ ಇವರಿಗೆ ಸಾಹಿತ್ಯಿಕವಾಗಿ ಹೆಚ್ಚು ಪ್ರಭಾವಬೀರಿದವರು ಕುವೆಂಪುರವರಾದರೂ ಈ ಮಿತಿಯನ್ನು ದಾಟಬೇಕು ಅನಿಸಿದಾಗ ಅಂಬೇಡ್ಕರ್, ಲೋಹಿಯಾ ಅವರುಗಳ ಪ್ರಭಾವ ಪ್ರಮುಖವಾಯಿತು. ಜೊತೆಗೆ ಮಾರ್ಕ್ಸ್‌ವಾದವು ಪ್ರಭಾವ ಬೀರಿತು. ದಲಿತರ ಬಗ್ಗೆ ನಡೆಯುತ್ತಿದ್ದ ಶೋಷಣೆ ವಿರುದ್ಧ ಹೋರಾಡಲು ನಿರ್ಧರಿಸಿ ಸಮಾಜದಲ್ಲಿ ವೈಚಾರಿಕ ಬದಲಾವಣೆ ತರಬೇಕೆಂಬ ಬಯಕೆ. ಈ ನಿಲುವನ್ನು ಹೊಂದಿದ ಹಲವು ಗೆಳೆಯರು ಸೇರಿಕೊಂಡು ವಿಚಾರವಾದಿ ಪರಿಷತ್ ಅನ್ನು ರಚಿಸಿ ಇದರ ಮೂಲಕ ಅಖಿಲ ಕರ್ನಾಟಕ ವಿಚಾರವಾದಿ ವಿದ್ಯಾರ್ಥಿ ಸಮ್ಮೇಳನ ಬೆಂಗಳೂರಿನಲ್ಲಿ ಆಯೋಜಿಸಿದಾಗ ಗಲಾಟೆ ಹೊಡೆದಾಟ ನಡೆಯಬಹುದೆಂಬ ಮುನ್ಸೂಚನೆಯೊಂದಿಗೆ ಸಭೆಯ ಅಧ್ಯಕ್ಷತೆ ವಹಿಸಿದ್ದ ಮಹನೀಯರು ಬರದಿದ್ದಾಗ ಸಿದ್ದಲಿಂಗಯ್ಯನವರೇ ಅಧ್ಯಕ್ಷರಾಗಬೇಕಾದ ಅನಿವಾರ್ಯತೆ. ಹೊಡೆದಾಟ ಗಲಾಟೆ ನಿರೀಕ್ಷೆಯಂತೆ ನಡೆದಾಗ ಈ ಗಲಾಟೆಯಲ್ಲಿ ಚಪ್ಪಲಿ ಏಟು ಬಿದ್ದವೆಂದು ನೆನಪಿಸಿಕೊಂಡಿದ್ದಾರೆ.

ಬೂಸಾ ಪ್ರಕರಣದಲ್ಲಿ ಬಿ.ಬಸವಲಿಂಗಪ್ಪ ರಾಜೀನಾಮೆ ನೀಡಬೇಕೆಂದು ವಿದ್ಯಾರ್ಥಿಗಳು ಚಳವಳಿ ನಡೆಸುತ್ತಿದ್ದ ಕಾಲ. ಇವರು ಪ್ರವಾಹದ ವಿರುದ್ಧ ಎಂದರೆ ಬಿ.ಬಸವಲಿಂಗಪ್ಪ ರಾಜೀನಾಮೆ ನೀಡಬಾರದೆಂಬ ಚಳವಳಿ ಪ್ರಾರಂಭಿಸಿದ್ದರು. 'ಜಾತಿ ಆಧಾರದ ಮೇಲೆ ನೀಡಿದ ಬೆಂಬಲ ಅಲ್ಲ ಇದು ವೈಚಾರಿಕ ಕಾರಣವಾಗಿತ್ತು' ಎಂದಿದ್ದಾರೆ. ಆದರೆ ಈ ಕಾರಣಕ್ಕಾಗಿ ನಡೆದ ಗಲಾಟೆಯಲ್ಲಿ ನನ್ನನ್ನು ರಕ್ಷಿಸಿದವರು ಮೇಲುಜಾತಿಯ ಶಿಕ್ಷಕರು ಮತ್ತು ಸ್ನೇಹಿತರು. ಇಲ್ಲಿ ನನ್ನನ್ನು ರಕ್ಷಣೆ ಮಾಡುವಾಗ ವಿಚಾರ ಮುಖ್ಯವಾಗಲಿಲ್ಲ ಸ್ನೇಹ ಮುಖ್ಯವಾಗಿತ್ತು ಎನಿಸುತ್ತದೆ.

ಹೀಗೆ ಬಾಲ್ಯದ ಅನುಭವದೊಟ್ಟಿಗೆ ತೆರೆದುಕೊಳ್ಳುವ 'ಊರುಕೇರಿ'ಯು ಬದುಕಿನ ಸಂಘರ್ಷಗಳಿಗೆ ಮುಖಾಮುಖಿಯಾಗುತ್ತಲೇ ಬಿಡಿಬಿಡಿಯಾಗಿ ರೂಪುಗೊಂಡ ಸಿದ್ದಲಿಂಗಯ್ಯನವರ ವ್ಯಕ್ತಿತ್ವವನ್ನು ವಸ್ತುನಿಷ್ಠವಾಗಿ ಪರಿಚಯಿಸುತ್ತಾರೆ. ಲೇಖಕರ ಕೌಟುಂಬಿಕ ಹಿನ್ನೆಲೆಯ ಸ್ಪಷ್ಟ ಚಿತ್ರಣದ ಜೊತೆಗೆ ಅವರು ಕಂಡ, ಅದನ್ನು ಅನುಭವಿಸಿದ ಹಸಿವು, ಬಡತನ, ಅಸ್ಪೃಶ್ಯತೆಯ ಅಪಮಾನ, ನಿರುದ್ಯೋಗದ ಸಮಸ್ಯೆಗಳ ನೇರ ಅಭಿವ್ಯಕ್ತಿಯಿದೆ. ವಿದ್ಯಾರ್ಥಿ ದೆಸೆಯಲ್ಲಿ ಇವರಿಗಿದ್ದ ಕ್ರಿಯಾಶೀಲತೆ, ತುಂಟತನ ನಂತರ ಇವರು ಬುದ್ಧಿವಂತ ವಿದ್ಯಾರ್ಥಿಯಾಗಿ, ಹೋರಾಟಗಾರರಾಗಿ, ಸಂಘಟಿತರಾಗಿ, ಭಾಷಣಕಾರರಾಗಿ ರೂಪುಗೊಂಡ ಬಗೆಯನ್ನು, ದಲಿತ ಸಂಘರ್ಷ ಸಮಿತಿ, ಬೂಸಾ ಚಳವಳಿ, ಬಂಡಾಯ ಸಂಘಟನೆಯ ಚಳವಳಿ, ಸಮ್ಮೇಳನಗಳಲ್ಲಿ

ಲೇಖಕರ ಒಡನಾಟದ ಚಿತ್ರಣ, ಸಮಾಜ ಪರವಾದ ಚಿಂತನೆ ಮತ್ತು ಹೋರಾಟದ ವ್ಯಕ್ತಿತ್ವವನ್ನು ಪರಿಚಯಿಸುತ್ತದೆ.

ಒಟ್ಟಾರೆಯಾಗಿ ಇಡೀ ಆತ್ಮಕತೆಗಳು ದಲಿತ ಬದುಕಿಗೆ ಒಂದು ಆಶಾಕಿರಣವಾಗಿ ಪ್ರಾಮಾಣಿಕತೆಯ ಎಲ್ಲಾ ವಿವರಗಳನ್ನು ಒಳಗೊಂಡಿವೆ. ದಲಿತರ ನೋವು, ದುಃಖ ದುಮ್ಮಾನ, ಪ್ರತಿಭೆ ಇದ್ದರೆ ಎಂತಹವರೂ ಮುಂದೆ ಬರಬಹುದೆಂಬುದಕ್ಕೆ ನಿದರ್ಶನಗಳಾಗಿವೆ. ಊರುಕೇರಿಯು ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಸಂದರ್ಭದಲ್ಲಿ ತಮ್ಮನ್ನು ಗುರುತಿಸಿಕೊಂಡ ಬಗೆಯನ್ನು ಕಟ್ಟಿಕೊಡುತ್ತವೆ.

ಪರಾಮರ್ಶನ ಗ್ರಂಥಗಳು:

1. ಸಿದ್ದಲಿಂಗಯ್ಯ, (1997), ಊರುಕೇರಿ ಭಾಗ–1, ಬೆಂಗಳೂರು: ಅಭಿನವ.
2. ಸಿದ್ದಲಿಂಗಯ್ಯ, (2006), ಊರುಕೇರಿ ಭಾಗ–2, ಬೆಂಗಳೂರು: ಅಭಿನವ.
3. ನರಹಳ್ಳಿ ಬಾಲಸುಬ್ರಹ್ಮಣ್ಯ, (2002), ಸಾಹಿತ್ಯ ಸಂಸ್ಕೃತಿ, ಬೆಂಗಳೂರು: ಅಂಕಿತ ಪುಸ್ತಕ.
4. ಮೊಗಳ್ಳಿ ಗಣೇಶ್, (2012), ದಲಿತ ಕಥನ, ಬೆಂಗಳೂರು: ಅಭಿನವ.
5. ರಂಗರಾಜ್ ವನದುರ್ಗ, (1998), ಬಂಡಾಯ ಸಾಹಿತ್ಯ ಸಂವೇದನೆ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.